## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಪ್ರಸ್ತುತ ನಿಷ್ಕ್ರಿಯವಾಗಿರುವ / ಮುಕ್ತಾಯಗೊಂಡಿರುವ ಸ್ವಾಯತ್ತ ಸಂಸ್ಥೆ ಅಥವಾ ಯೋಜನೆಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಎನ್.ಪಿ.ಎಸ್. ನೌಕರರ / ಅಧಿಕಾರಿಗಳ ಉದ್ಯೋಗದಾತರ ವಂತಿಗೆ ಪಾವತಿಸುವ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂ : ಆಇ (ಎಸ್.ಪಿ.ಎಲ್) 04 ಪಿಇಟಿ 2005, ದಿನಾಂಕ : 31.03.2006.

2. ಸರ್ಕಾರದ ಆದೇಶ ಸಂ : ಆಇ (ಎಸ್.ಪಿ.ಎಲ್) 01 ಪಿಇಎನ್ 2010, ದಿನಾಂಕ : 20.10.2010.

3. ಸರ್ಕಾರದ ಆದೇಶ ಸಂ : ಆಇ (ಎಸ್.ಪಿ.ಎಲ್) 219 ಪಿಇಎನ್ 2012, ದಿನಾಂಕ : 30.01.2014.

4. ಪತ್ರ ಸಂಖ್ಯೆ: ಖನಿ/ಎನ್.ಪಿ.ಎಸ್./01/05/2018-19 ದಿ:02.07.2019 – ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು ರವರಿಂದ

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿನ ಸರ್ಕಾರದ ಆದೇಶದಲ್ಲಿ ದಿನಾಂಕ: 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರುವ ಎಲ್ಲಾ ಸರ್ಕಾರಿ ನೌಕರರಿಗೆ ಕಡ್ಡಾಯವಾಗಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿನ ಸರ್ಕಾರದ ಆದೇಶದಲ್ಲಿ ದಿನಾಂಕ : 01.01.2004 ರಿಂದ ಸೇವೆಗೆ ಸೇರಿರುವ ಅಖಿಲ ಭಾರತ ಸೇವೆಯ (ಕರ್ನಾಟಕ ಕೇಡರ್) ಅಧಿಕಾರಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ (3) ರಲ್ಲಿನ ಸರ್ಕಾರದ ಆದೇಶದಲ್ಲಿ ನಿಯೋಜನೆ ಮೇರೆಗೆ ಸ್ವಾಯತ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಪಿ.ಎಸ್. ನೌಕರರಿಗೆ / ಅಧಿಕಾರಿಗಳಿಗೆ ನೂತನ ಪಿಂಚಣಿ ಯೋಜನೆ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕ್ರಮದ ಬಗ್ಗೆ ಆದೇಶಿಸಲಾಗಿದೆ.

ಮೇಲೆ ಓದಲಾದ (4)ರಲ್ಲಿನ ಪತ್ರದಲ್ಲಿ ಖಜಾನೆ ನಿರ್ದೇಶಕರು, ಕೆಲವೊಂದು ಸ್ವಾಯತ್ತ ಸಂಸ್ಥೆಗಳಲ್ಲಿ ನೂತನ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲವೆಂದು, ಅಲ್ಲದೇ ನಿಯೋಜಿತ ಅಧಿಕಾರಿ / ನೌಕರರು ಮಾತೃ ಇಲಾಖೆಗೆ ಹಿಂದಿರುಗಿದ ನಂತರ ಸದರಿ ಸ್ವಾಯತ್ತ ಸಂಸ್ಥೆಯು ಮುಚ್ಚಲಾಗಿರುತ್ತದೆ ಅಥವಾ ಯೋಜನೆ ಪೂರ್ಣಗೊಂಡಿರುತ್ತದೆಂದು, ಇಂತಹ ಸಂದರ್ಭಗಳಲ್ಲಿ ನಿಯೋಜನಾ ಅವಧಿಗೆ ಸಂಬಂಧಿಸಿದ ಉದ್ಯೋಗದಾತರ ವಂತಿಗೆಯನ್ನು ಪಾವತಿಸುವ ಸಂಬಂಧ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಅದರಂತೆ, ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂ : ಆಇ(ವಿ) 05 ಪಿಇಎನ್ 2016, ಬೆಂಗಳೂರು, ದಿನಾಂಕ : 16.07.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಿಯೋಜಿತ ಅಧಿಕಾರಿ / ನೌಕರರು ಮಾತೃ ಇಲಾಖೆಗೆ ಹಿಂದಿರುಗಿದ ನಂತರ, ಸದರಿ ಸ್ವಾಯತ್ತ ಸಂಸ್ಥೆಯು ಮುಚ್ಚಲಾದ ಅಥವಾ ಯೋಜನೆ

ಪೂರ್ಣಗೊಂಡಿರುವ ಸಂದರ್ಭದಲ್ಲಿ ನಿಯೋಜನಾ ಅವಧಿಗೆ ಸಂಬಂಧಿಸಿದ ಉದ್ಯೋಗದಾತರ ವಂತಿಗೆಯನ್ನು ಮುಂದೆ ಸೂಚಿಸಿರುವ ಕಾರ್ಯ ವಿಧಾನವನ್ನು ಅನುಸರಿಸುವ ಷರತ್ತಿಗೆ ಒಳಪಟ್ಟು ಸರ್ಕಾರದಿಂದ ಪಾವತಿಸಲು ಮಂಜೂರಾತಿ ನೀಡಲಾಗಿದೆ.

## I. ಸ್ವಾಯತ್ತ ಸಂಸ್ಥೆಯು ಪಾವತಿಸಬೇಕಾದ ಉದ್ಯೋಗದಾತರ ಬ್ಯಾಕ್‌ಲಾಗ್ ವಂತಿಗೆ (Employer Backlog Contribution) ಪಾವತಿ ಪ್ರಕ್ರಿಯೆ:

ಸ್ವಾಯತ್ತ ಸಂಸ್ಥೆ / ಸಂಸ್ಥೆಯಲ್ಲಿನ ಯೋಜನೆಗೆ ಸಂಬಂಧಿಸಿದ ಆಡಳಿತ ಇಲಾಖೆಯಿಂದ ಉದ್ಯೋಗದಾತರ ವಂತಿಗೆ ಪಾವತಿಸಲು ಸಾಧ್ಯವಿಲ್ಲವೆಂಬುದರ ಬಗ್ಗೆ ಮಾಹಿತಿ ಪಡೆದ ನಂತರ, ಸ್ವಾಯತ್ತ ಸಂಸ್ಥೆಯಲ್ಲಿನ ನಿಯೋಜನಾ ಅವಧಿಗೆ ಉದ್ಯೋಗದಾತರ ಬ್ಯಾಕ್‌ಲಾಗ್ ವಂತಿಗೆಯನ್ನು ಮಾತೃ ಇಲಾಖೆಗೆ ಹಿಂದಿರುಗಿದ ನಂತರ ಪಾವತಿಸುವ ಕ್ರಮ ಕೆಳಕಂಡಂತಿರುತ್ತದೆ:

1. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಚೇರಿಯ ಡಿಡಿಓ ರವರು ಹೆಚ್.ಆರ್.ಎಂ.ಎಸ್.ನಲ್ಲಿ ನಿಯೋಜನಾ ಅವಧಿಯಲ್ಲಿನ ಮೂಲವೇತನ, ತುಟ್ಟಿಭತ್ಯೆ ದರಗಳನ್ನು ಪರಿಶೀಲಿಸಿ, ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ Schedule IV & V ಜನರೇಟ್ ಮಾಡಿ, ಸರ್ಕಾರದ ಬ್ಯಾಕ್‌ಲಾಗ್ ವಂತಿಗೆ ಪಾವತಿ ಸಂಬಂಧ Schedule IV & V ಗಳನ್ನು ಬೆಂಗಳೂರಿನಲ್ಲಿರುವ ಎನ್.ಪಿ.ಎಸ್. ಘಟಕಕ್ಕೆ ಸಲ್ಲಿಸುವುದು.
2. ಎನ್.ಪಿ.ಎಸ್. ಘಟಕದಲ್ಲಿ ಸದರಿ Schedule IV & V ಗಳನ್ನು ಪರಿಶೀಲಿಸಿ ಸ್ವಾಯತ್ತ ಸಂಸ್ಥೆಯ ಅವಧಿಯ Employer Contribution ಅನ್ನು ಸರ್ಕಾರಿ ಲೆಕ್ಕಶೀರ್ಷಿಕೆ 2071ರಡಿ ಡ್ರಾ ಮಾಡಿ ಸಂಬಂಧಪಟ್ಟ ನೌಕರರ ಪ್ರಾನ್ ಖಾತೆಗೆ ಜಮೆ ಮಾಡಲು ಕ್ರಮ ಕೈಗೊಳ್ಳುವುದು.
3. ನೌಕರರ ಎನ್.ಪಿ.ಎಸ್. ವಂತಿಗೆಯನ್ನು ಸದರಿಯವರ ವೇತನದಿಂದ ಕಂತುಗಳ ರೂಪದಲ್ಲಿ ಕಟಾವಣೆ ಆಗುವುದು ಅಥವಾ ನೌಕರರು ಇಚ್ಛಿಸಿದಲ್ಲಿ ಒಂದೇ ಇಡಿಗಂಟಿನಲ್ಲಿ ಪಾವತಿಸಲು ಅವಕಾಶವಿದ್ದು, ಯಾವುದಾದರೂ ಒಂದು ಆಯ್ಕೆಯನ್ನು ಹೆಚ್.ಆರ್.ಎಂ.ಎಸ್.ನಲ್ಲಿ ನೀಡತಕ್ಕದ್ದು.

## II. ಮಿಸ್ಸಿಂಗ್ ಕಾಂಟ್ರಿಬ್ಯೂಷನ್ Missing Regular Contribution :

ಎನ್.ಪಿ.ಎಸ್. ನೌಕರರು ನಿಯೋಜನೆ ಮೇಲೆ ಸ್ವಾಯತ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಸದರಿ ಸ್ವಾಯತ್ತ ಸಂಸ್ಥೆಯಲ್ಲಿ ಎನ್.ಪಿ.ಎಸ್. ಅನುಷ್ಠಾನಗೊಳಿಸಿರುವುದಿಲ್ಲ. ತದನಂತರ ಸ್ವಾಯತ್ತ ಸಂಸ್ಥೆಯು ಅಸ್ತಿತ್ವದಲ್ಲಿರುವುದಿಲ್ಲ. ಸ್ವಾಯತ್ತ ಸಂಸ್ಥೆಯ / ಯೋಜನೆಗೆ ಸಂಬಂಧಿಸಿದ ಆಡಳಿತ ಇಲಾಖೆಯಿಂದ ಉದ್ಯೋಗದಾತರ ವಂತಿಗೆ ಪಾವತಿಸಲು ಸಾಧ್ಯವಿಲ್ಲವೆಂಬ

ಬಗ್ಗೆ ಮಾಹಿತಿ ಪಡೆದ ಸಂದರ್ಭದಲ್ಲಿ ನಿಯೋಜನಾ ಅವಧಿಯ ಉದ್ಯೋಗದಾತರ ವಂತಿಗೆಯನ್ನು ಪಾವತಿಸುವ ಕ್ರಮ ಕೆಳಕಂಡಂತಿರುತ್ತದೆ:

1. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಡಿಡಿಓ ರವರು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ನಿಯೋಜನಾ ಅವಧಿಯಲ್ಲಿ ಸ್ವಾಯತ್ತ ಸಂಸ್ಥೆಯಲ್ಲಿ ಪಾವತಿಸಿರುವ ವೇತನದ ಮಾಹಿತಿಯನ್ನು:

   HRMS ⇨ History ⇨ Manual bill entry ಮೆನುವಿನಲ್ಲಿ ನಮೂದಿಸಿ, ಸ್ವಾಯತ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ ಅವಧಿಯ ವೇತನ ಪಾವತಿ ವಿವರ ತ:ಖ್ತೆಯೊಂದಿಗೆ ಎನ್.ಪಿ.ಎಸ್. ಘಟಕಕ್ಕೆ approval ಗಾಗಿ ಹೆಚ್.ಆರ್.ಎಂ.ಎಸ್.ನಲ್ಲಿ request ಸಲ್ಲಿಸಬೇಕು.

2. ಎನ್.ಪಿ.ಎಸ್. ಘಟಕದಲ್ಲಿ ಸದರಿ ನೌಕರರ Statement of Transaction (SOT) & HRMS Contribution Register ಪರಿಶೀಲಿಸಿ, ಸದರಿ Missing Contribution ಅವಧಿಯಲ್ಲಿ ಎನ್.ಪಿ.ಎಸ್. ವಂತಿಗೆ ವೇತನದಿಂದ ಕಟಾವಣೆಯಾಗಿಲ್ಲ ವೆಂದು ಖಚಿತಪಡಿಸಿಕೊಂಡು, ತದನಂತರ ಹೆಚ್.ಆರ್.ಎಂ.ಎಸ್. ನಲ್ಲಿ Missing Contribution request ಅನ್ನು approval ಮಾಡತಕ್ಕದ್ದು.

3. ನಂತರ ಡಿಡಿಓ ರವರು ವೇತನ ಬಿಲ್ ಜನರೇಟ್ ಮಾಡಿದಾಗ ಸ್ವಾಯತ್ತ ಸಂಸ್ಥೆಯಲ್ಲಿನ ಕರ್ತವ್ಯದ ಅವಧಿಗೆ ಸಂಬಂಧಿಸಿದ ವಂತಿಗೆಗೆ ಹೆಚ್ಚುವರಿಯಾಗಿ ವಂತಿಗೆ ಕಟಾವಣೆಗೊಂಡು Schedule IA ಜನರೇಟ್ ಆಗುವುದು. ಈ ರೀತಿ ಜನರೇಟ್ ಆದ Schedule IAರಲ್ಲಿ ಡಿಡಿಓ ವೇತನ ಬಿಲ್ಲಿನೊಂದಿಗೆ ಸಂಬಂಧಪಟ್ಟ ಖಜಾನೆಗೆ ಸಲ್ಲಿಸತಕ್ಕದ್ದು.

4. ನಿಯೋಜನಾ ಅವಧಿಯ ನೌಕರರ ವಂತಿಗೆಯ ಒಟ್ಟು ಮೊತ್ತವನ್ನು ಪಾವತಿಸಲು ಸಿದ್ಧವಿರುವ ಸಂದರ್ಭದಲ್ಲಿ ಸದರಿ ಅಧಿಕಾರಿ/ನೌಕರರ ಒಟ್ಟು ಮೊತ್ತವನ್ನು ಲೆಕ್ಕ ಶೀರ್ಷಿಕೆ 0071–01–800–3–01 ಗೆ ಜಮೆ ಮಾಡಿರುವ ಚಲನ್ ಪ್ರತಿಯೊಂದಿಗೆ Schedule IIIA ಅನ್ನು ಸಂಬಂಧಪಟ್ಟ ಖಜಾನೆಗೆ ಸಲ್ಲಿಸತಕ್ಕದ್ದು.

5. ನಿಯೋಜನಾ ಅವಧಿಯ ಉದ್ಯೋಗದಾತರ Missing Contributionನ ಒಟ್ಟು ವಂತಿಗಯನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 2071–01–117–0–01 ಯಿಂದ ಸೆಳೆಯಲು ಹಾಗೂ ಲೆಕ್ಕಶೀರ್ಷಿಕೆ 0071–01–800–3–01 ಗೆ ಜಮೆ ಮಾಡಲಾದ ನೌಕರರ ಒಟ್ಟಾರೆ ವಂತಿಗೆ ಮೊತ್ತವನ್ನು ಲೆಕ್ಕ ಶೀರ್ಷಿಕೆ 0071–01–900–0–00 (deduct refunds) ರಿಂದ CTS-9 ರಲ್ಲಿ ಡ್ರಾ ಮಾಡಲು ಎನ್.ಪಿ.ಎಸ್. ಘಟಕದಿಂದ ಸಂಬಂಧಪಟ್ಟ ಖಜಾನೆಯವರು ಅನುಮತಿ ಪಡೆದು ಮುಂದಿನ ಕ್ರಮಕೈಗೊಳ್ಳತಕ್ಕದ್ದು.

6. ಖಜಾನೆಯವರು ಸಿಆರ್‌ಎ ರವರ Unequal Contribution FPU Software ಉಪಯೋಗಿಸಿ ಸಂಬಂಧಪಟ್ಟ ಅಧಿಕಾರಿ / ನೌಕರರ ವಂತಿಗೆ ಹಾಗೂ ಉದ್ಯೋಗದಾತರ ವಂತಿಗೆಗೆ ಪ್ರತ್ಯೇಕವಾಗಿ SCF ತಯಾರಿಸಿ ಸಿಆರ್‌ಎ ಗೆ ಅಪ್‌ಲೋಡ್ ಮಾಡಬೇಕಿರುತ್ತದೆ. ತದನಂತರ ಲೆಕ್ಕಶೀರ್ಷಿಕೆ 2071–01–117–0–01 CTS-8 ರ ಬಿಲ್ಲಿನಲ್ಲಿ ಉದ್ಯೋಗದಾತರ ವಂತಿಗೆಯನ್ನು ಹಾಗೂ ಲೆಕ್ಕಶೀರ್ಷಿಕೆ 0071–01–900–0–00 (deduct refunds) ರಿಂದ ನೌಕರರ ವಂತಿಗೆಯನ್ನು CSF ನೊಂದಿಗೆ ಧನಾದೇಶವನ್ನು ಸಂಬಂಧಪಟ್ಟ ಏಜೆನ್ಸಿ ಬ್ಯಾಂಕಿನ ಮೂಲಕ ಟ್ರಸ್ಟೀ ಬ್ಯಾಂಕಿಗೆ NEET/RTGS ಮಾಡಲು ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

16.7.

(ಪ್ರಕಾಶ್.ವೈ.ಕೆ.)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ).

ಇವರಿಗೆ:

1) ಸರ್ಕಾರದ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿಗಳು.
2) ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ /ಆಡಿಟ್–1), ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
4) ಎಲ್ಲಾ ಇಲಾಖಾ ಮುಖ್ಯಸ್ಥರುಗಳು / ಎಲ್ಲಾ ಡಿ.ಡಿ.ಓ. ಗಳು.
5) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

6) ಎಲ್ಲಾ ಮಂಡಳಿಗಳು/ಮಹಾನಗರಪಾಲಿಕೆಗಳು/ಸೊಸೈಟಿಗಳು/ವಿಶ್ವವಿದ್ಯಾನಿಲಯಗಳು/ಅನುದಾನಿತ ಶಿಕ್ಷಣ ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳು.
7) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.
11) ಕಾರ್ಯದರ್ಶಿ, ಇ-ಆಡಳಿತ, ಹೆಚ್‌ಆರ್‌ಎಂಎಸ್, ಬಹುಮಹಡಿ ಕಟ್ಟಡ.
12) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
13) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
14) ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
15) ಉಪನಿರ್ದೇಶಕರು, ಭಾರತ ಸರ್ಕಾರ, UIDAI, ವಲಯ ಕಚೇರಿ, ಖನಿಜ ಭವನ, ರೇಸ್ ಕೋರ್ಸ್ ರೋಡ್, ಬೆಂಗಳೂರು.
16) ಉಪನಿರ್ದೇಶಕರು, ನೂತನ ಪಿಂಚಣಿ ಘಟಕ, ವಿ.ವಿ.ಟವರ್, ಬೆಂಗಳೂರು.
17) ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
18) ಪ್ರಧಾನ ನಿರ್ದೇಶಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಶಾಂತಿನಗರ, ಬೆಂಗಳೂರು.
19) ನಿರ್ದೇಶಕರು, ಯೋಜನಾ ಇಲಾಖೆ(ನಗರ & ಗ್ರಾಮಾಂತರ), ಬಹುಮಹಡಿ ಕಟ್ಟಡ.
20) ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
21) ಕಾರ್ಯದರ್ಶಿ, ವಿತ್ತೀಯ ಸುಧಾರಣೆ, ಆರ್ಥಿಕ ಇಲಾಖೆ, ಬಹುಮಹಡಿ ಕಟ್ಟಡ.
22) ವಾರಪತ್ರ / ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Visit, the Official Website of Finance Department, GOK:
www.finance.kar.nic.in